155 ಸೇ6 ನಿ= 330 (51)
4KR
1704

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಇವರ ನಿಯಮ 330ರ ಸೂಚನಾ ಪತ್ರಕ್ಕೆ ಉತ್ತರ.

**ನಿಯಮ 330ರ ಮೇರೆಗೆ ಸೂಚನೆ:-**

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಬಡ ಕಟ್ಟಡ ಕಾರ್ಮಿಕರಿಗೆ ಉಚಿತ ಆರೋಗ್ಯ ಸೇವೆ ನೀಡಲು ಕೆಟಿಪಿಪಿ ಕಾಯ್ದೆ, 1999 ಮತ್ತು 2000 ಉಲ್ಲಂಘಿಸಿ ಯಾವುದೇ ಸಿಬ್ಬಂದಿ, ಆಸ್ಪತ್ರೆ, ಹೊಂದಿಲ್ಲದ ಕೇವಲ 3 ಬೆಡ್ ರೂಮ್ ಮನೆಯ ವಿಳಾಸದಲ್ಲಿರುವ ಯಾವುದೇ ಅನುಭವ ಇಲ್ಲ ಯಾವುದೇ ಸೌಲಭ್ಯಗಳು ಇಲ್ಲದ ಆಸ್ಪತ್ರೆಯ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP 13046/2024 ಇನ್ನೂ ತೀರ್ಮಾನಕ್ಕೆ ಬಾಕಿ ಇದೆ ಆದರೂ ತರಾತುರಿಯಲ್ಲಿ ರೂ.650 ಕೋಟಿ ಟೆಂಡರ್ ನೀಡಿ ಭ್ರಷ್ಟಾಚಾರವೆಸಗಿರುವ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

**ಉತ್ತರ:-**

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:13046/2024 ರಲ್ಲಿ ಮಂಡಳಿಯಿಂದ ಕರೆಯಲಾದ ಈ ಕೆಳಕಂಡ 03 ಟೆಂಡರ್ ಗಳನ್ನು ಪ್ರಶ್ನಿಸಲಾಗಿರುತ್ತದೆ.

ಎ) ದಿನಾಂಕ:02-03-2024 ರಂದು 100 ಸಂಚಾರಿ ಆರೋಗ್ಯ ಘಟಕಗಳ ವಾಹನಗಳ ಖರೀದಿಗಾಗಿ ಕರೆದ ಟೆಂಡರ್

ಬಿ) ದಿನಾಂಕ:07-03-2024 ರಂದು 100 ಸಂಚಾರಿ ಆರೋಗ್ಯ ಘಟಕಗಳ ನಿರ್ವಹಣೆಗಾಗಿ ಕರೆದ ಟೆಂಡರ್.

ಸಿ) ದಿನಾಂಕ:12-03-2024 ರಂದು ಸಂಚಾರಿ ಆರೋಗ್ಯ ಘಟಕಗಳಲ್ಲಿ ವೈದ್ಯಕೀಯ ಉಪಕರಣಗಳನ್ನು ಹಾಗೂ ತಂತ್ರಾಂಶವನ್ನು ಅಳವಡಿಸಲು ಕರೆದ ಟೆಂಡರ್.

ಈ ರಿಟ್ ಅರ್ಜಿಯಲ್ಲಿ ಮಂಡಳಿಯ ವಿರುದ್ಧ ಯಾವುದೇ ತಡೆಯಾಜ್ಞೆ, ನಿರ್ದೇಶನ ಅಥವಾ ನಿರ್ಬಂಧವನ್ನು ಮಾನ್ಯ ಉಚ್ಚ ನ್ಯಾಯಾಲಯವು ಹೊರಡಿಸಿರುವುದಿಲ್ಲ. ಈ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಸದರಿ ರಿಟ್ ಅರ್ಜಿಯಲ್ಲಿ ಯಾವುದೇ ಆಸ್ಪತ್ರೆಯ ಉಲ್ಲೇಖವಿರುವುದಿಲ್ಲ. ದಿನಾಂಕ: 12-07-2024 ರ ನಂತರ ಈ ಪ್ರಕರಣದಲ್ಲಿ ವಿಚಾರಣೆ ನಡೆದಿರುವುದಿಲ್ಲ. 03 ಕೊಠಡಿಗಳ ಮನೆಯ ವಿಳಾಸದಲ್ಲಿರುವ ಆಸ್ಪತ್ರೆಗೆ ಸಂಬಂಧಿಸಿದಂತೆ ಮಂಡಳಿಯಿಂದ ಯಾವುದೇ ಕಾರ್ಯಾದೇಶ ನೀಡಿರುವುದಿಲ್ಲ.

ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:2648/2023 ಅನ್ನು ಕೂಡ ದಾಖಲಿಸಲಾಗಿದ್ದು, ಈ ಅರ್ಜಿಯಲ್ಲಿ ಮೇಲೆ ಹೇಳಿದ 03 ಟೆಂಡರ್ ಗಳನ್ನು ಪ್ರಶ್ನಿಸಲಾಗಿರುತ್ತದೆ. ಆದರೆ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:19-02-2024 ರಂದು ಈ ಅರ್ಜಿಯನ್ನು ವಜಾ

ಮಾಡಿ, ಅರ್ಜಿದಾರರಿಗೆ ಹೊಸದಾಗಿ ಕರೆಯಲಾಗುವ ಅಥವಾ ಈಗಾಗಲೇ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ನೀಡಿರುತ್ತದೆ. ಈಗಾಗಲೇ ಟೆಂಡರ್ ಕರೆಯಲಾಗಿದ್ದರೆ, ಸದರಿ ಟೆಂಡರ್‌ಗಳಿಗೆ ತಾರ್ಕಿಕ ಅಂತ್ಯವನ್ನು ತರಲು ಪ್ರತಿವಾದಿಗಳಿಗೆ ಅಂದರೆ ಮಂಡಳಿಗೆ ಅವಕಾಶವನ್ನು ನೀಡಲಾಗಿರುತ್ತದೆ.

ಮೇಲೆ ಹೇಳಿದ 03 ಟೆಂಡರ್‌ಗಳ ಒಟ್ಟು ಮೌಲ್ಯವು ರೂ.129.00 ಕೋಟಿಗಳಾಗಿರುತ್ತದೆ. ಆದುದರಿಂದ ಈ ಟೆಂಡರ್‌ಗಳಲ್ಲಿ ರೂ.650 ಕೋಟಿಗಳ ಭ್ರಷ್ಟಾಚಾರವಾಗಿರುತ್ತದೆ ಎನ್ನುವುದು ವಾಸ್ತವವಾಗಿರುವುದಿಲ್ಲ.

**ಕಾಇ 104 ಎಲ್‌ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**